# ಮೂರನೆ ಸಹಸ್ರಮಾನಕ್ಕೆ ಅನುಷ್ಠಾನ ವೇದಾಂತ

**ಕೆ.ಬಿ. ಪ್ರಭುಪ್ರಸಾದ್**

**ಶುಷ್ಕ ವೇದಾಂತತತ್ತ್ವವನ್ನು ಕ್ರಿಯಾಶೀಲ ಜೀವನತತ್ತ್ವವಾಗಿ ಮಾರ್ಪಡಿಸಿದ ಕೀರ್ತಿ ವಿವೇಕಾನಂದರದು. ವೇದಾಂತದ ಈ ಅನುಷ್ಠಾನಿಕ ಆಯಾಮದ ರೂಪುರೇಖೆಯನ್ನು ಈ ಲೇಖನದಲ್ಲಿ ಕಾಣುತ್ತೇವೆ. ಡಾ. ಪ್ರಭುಪ್ರಸಾದ್ ಅವರು ಕನ್ನಡದ ಹೆಸರಾಂತ ಲೇಖಕರು.**

ಸೆಪ್ಟೆಂಬರ್ ೧೧, ಅಮೆರಿಕದ ಇತಿಹಾಸದಲ್ಲಿ ಮಾತ್ರವಲ್ಲ ಜಗತ್ತಿನ ಇತಿಹಾಸದಲ್ಲೇ ಮರೆಯಲಾಗದ ಪರ್ವದಿನ, ವಿಶೇಷವಾದ ಮಹತ್ವಪೂರ್ಣ ದಿನ. ೧೮೯೩, ಸೆಪ್ಟೆಂಬರ್ ೧೧, ಅಮೆರಿಕದ ಷಿಕಾಗೊ ನಗರದಲ್ಲಿ ವಿಶ್ವದ ಎಲ್ಲ ಧರ್ಮಗಳ ಸಂಸತ್ ಮಹಾಧಿವೇಶ ಆರಂಭವಾಗಿ, ಅಂದಿನ ಅಧಿವೇಶನದ ಕಟ್ಟ ಕಡೆಯ ಉಪನ್ಯಾಸಕರಾಗಿ ನಿಂತ, ಭಾರತದ ಪ್ರತಿನಿಧಿ, ಸ್ವಾಮಿ ವಿವೇಕಾನಂದರು ಹತ್ತೇ ನಿಮಿಷಗಳ ಅವಧಿಯಲ್ಲಿ ಹಿಂದೂಧರ್ಮದ ದಿವ್ಯಸಂದೇಶವನ್ನು ಘೋಷಿಸಿ ಜಗತ್ತಿನ ಚಿಂತನಶೀಲ ಮಹಾನಾಯಕರುಗಳನ್ನು ಚಕಿತಗೊಳಿಸಿದರು. ಮೂರನೆ ಸಹಸ್ರಮಾನದ ಹೊತ್ತಿಗೆ ಮಹಾವೃಕ್ಷವಾಗಿ ಬೆಳೆದು ಪ್ರೀತಿ, ಶಾಂತಿ, ಭಾವೈಕ್ಯತೆಗಳ ಫಲಗಳನ್ನು ಕೊಡುವ ವಿಶ್ವ ಮಾನವತ್ವದ ಬೀಜವನ್ನು ಅವರು ಲೋಕದ ವಿರಾಡ್ಮನದಲ್ಲಿ ಅಂದು ನೆಟ್ಟರು. ಜನಮನದ ಆಶೋತ್ತರಗಳು ಈಡೇರುವುವೆಂಬ ಭರವಸೆಯ ಶುಭ ಶಂಖಧ್ವನಿ ಮೊಳಗಿ ವಿಶ್ವದೆಲ್ಲೆಡೆ ಅನುರಣಿತವಾಯಿತು.

೨೦೦೧ರ ಸೆಪ್ಟೆಂಬರ್ ೧೧ — ೧೮೯೩ರ ಸೆಪ್ಟೆಂಬರ್ ೧೧ನೆ ತಾರೀಖಿಗೆ ಸರಿಯಾಗಿ ೧೦೮ ವರ್ಷಗಳು ತುಂಬಿದ ಅದೇ ಸೆಪ್ಟೆಂಬರ್೧೧—ಜಗತ್ತಿನ ಅತಿ ಬಲಾಢ್ಯ ರಾಷ್ಟ್ರವಾಗಿ ಬೆಳೆದು ಹೆಮ್ಮೆಯ ಧ್ವಜವನ್ನು ಮುಗಿಲೆತ್ತರಕ್ಕೆ ಎತ್ತಿ ಹಿಡಿದಿದ್ದ, ಜಗತ್ತಿನ ಅತ್ಯಂತ ಎತ್ತರದ ಬಹು ಮಹಡಿ ಕಟ್ಟಡವೆನಿಸಿದ, ವಿಶ್ವವಾಣಿಜ್ಯ ಕೇಂದ್ರವನ್ನು ಆಸ್ಫೋಟಕಮದ್ದು ತುಂಬಿದ ವಿಮಾನವನ್ನು ನುಗ್ಗಿಸಿ ಢಿಕ್ಕಿ ಹೊಡೆಸಿ ಉರುಳಿಸಿದರು ಮತಾಂಧರಾದ ಭಯೋತ್ಪಾದಕರು. ಅದೇ ಕ್ಷಣ ರಾಜಧಾನಿ ವಾಷಿಂಗ್ಟನ್‌ನಲ್ಲಿ ಅಮೆರಿಕದ ರಕ್ಷಣಾ ಕೇಂದ್ರ ಕಾರ್ಯಾಲಯ—ಪೆಂಟಾಗನ್—ಕಟ್ಟಡವನ್ನೂ ಭಗ್ನಗೊಳಿಸಿದರು. ಜಗತ್ತೇ ತಲ್ಲಣಗೊಂಡು ತತ್ತರಿಸಿತು. ಮತ್ತೊಮ್ಮೆ ಅಮೆರಿಕದ ಹಾಗೂ ಜಗತ್ತಿನ ಎಲ್ಲ ಚಿಂತನಶೀಲ ಮಹಾನಾಯಕರು ಚಕಿತಗೊಂಡರು. ಮಾನಸಿಕ ಆಘಾತವಾಗಿ ಚಿಂತೆಗೀಡಾದರು.



ಪ್ರತಿಯೊಂದು ಧರ್ಮಧ್ವಜದ ಮೇಲೂ ಬಹುಬೇಗ ಈ ಮಾತುಗಳು ಬರೆಯಲ್ಪಡುತ್ತವೆ : "ಹೋರಾಟವಲ್ಲ, ಸೌಹಾರ್ದ; "ವಿನಾಶವಲ್ಲ, ಸ್ವೀಕಾರ"; "ವೈಮನಸ್ಯವಲ್ಲ, ಸಾಮರಸ್ಯ ಮತ್ತು ಶಾಂತಿ."

**—ಸ್ವಾಮಿ ವಿವೇಕಾನಂದ** (೧೮೯೩ ಸೆಪ್ಟೆಂಬರ್‌ನಲ್ಲಿ)

೧೮೯೩ರಲ್ಲಿ ಆ ದಿನ ಸ್ವಾಮೀಜಿಯವರ ದಿವ್ಯ ನುಡಿಗಳ ಸಂದೇಶದ ಮಧುರವಾದ ವಿಶ್ವಗಾನ ಲೋಕದೆಲ್ಲೆಡೆ ಹೃನ್ಮನಗಳನ್ನು ಹೊಸಭರವಸೆಯಲ್ಲಿ ನಲಿಯುವಂತೆ ಮಾಡಿತು. ಆತ್ಮ ಜಾಗ್ರತಗೊಂಡು, ಮನ ಮುದಗೊಂಡು, ತನು ಪುಲಕಿತವಾಯಿತು. ಅದು ಧರ್ಮ ಮಾಡಿದ ಪರಿಣಾಮ. ೨೦೦೧ರಲ್ಲಿ ಅದೇ ದಿನ ಮತಾಂಧರ ಕ್ರೌರ್ಯ, ಹಿಂಸೆ, ವೈಷಮ್ಯಗಳ ಕೃತ್ಯ ಲೋಕದೆಲ್ಲೆಡೆ ಹೃನ್ಮನಗಳನ್ನು ಭೀತಗೊಳಿಸಿ ಹತಾಶೆಯಲ್ಲಿ ನರಳುವಂತೆ ಮಾಡಿತು. ವಿನಾಶದ ಕರಾಳಛಾಯೆ ಕವಿಯಿತು. ಇದು ಮತಾಂಧತೆ ಮಾಡಿದ ಪರಿಣಾಮ. ಸ್ವಾಮೀಜಿಯ ದಿವ್ಯವಾಣಿ ದೈವತ್ವವನ್ನೆಚ್ಚರಗೊಳಿಸಿ ಪ್ರೇಮವನ್ನೂ ಸೋದರತ್ವವನ್ನೂ ಬೆಳೆಸಿದರೆ, ಮತಾಂಧರ ಹೀನಕೃತ್ಯ ರಾಕ್ಷಸಿ ಪ್ರವೃತ್ತಿಯನ್ನು ಕೆರಳಿಸಿ ದ್ವೇಷ-ಪ್ರತೀಕಾರಗಳನ್ನು ಹೊಮ್ಮಿಸಿತು.

ಈ ಎರಡೂ ಘಟನೆಗಳು ಪರಸ್ಪರ ವಿರೋಧವಾಗಿದ್ದರೂ ತನ್ನ ತನ್ನ ರೀತಿಯಲ್ಲಿ ಪ್ರಚೋದಿಸಿದ ಸಂದೇಶ ಮಾತ್ರ ಒಂದೇ. ಮೂರನೆ ಸಹಸ್ರಮಾನದಲ್ಲಿ ಸಮಸ್ತ ಮಾನವ ಜಗತ್ತಿನಲ್ಲಿ ಆಚರಣೆಗೆ ತರಬೇಕಾದ, ಬರಬೇಕಾದ, ಏಕೈಕ ಉದ್ಧಾರದ ಮಾರ್ಗವೆಂದರೆ ಜಾತಿ-ಕೋಮುವಾದ ಮತ್ತು ಎಲ್ಲ ಬಗೆಯ ಭೇದ-ಅಸಮಾನತೆಗಳನ್ನು ಹೋಗಲಾಡಿಸಿ, ಪ್ರೀತಿ-ಸೌಹಾರ್ದ-ವಿಶ್ವ ಭ್ರಾತೃತ್ವಗಳನ್ನು ಬೆಳೆಸುವ, ಮಾನವರೆಲ್ಲರನ್ನೂ ಒಂದು ಗೂಡಿಸುವ ಧರ್ಮ ಅಥವಾ ಆಧ್ಯಾತ್ಮ ದೃಷ್ಟಿಯನ್ನು ಬೆಳೆಸಿಕೊಳ್ಳುವುದು! ಅದುವೇ ಶ್ರೀರಾಮಕೃಷ್ಣ-ವಿವೇಕಾನಂದ ಪ್ರಣೀತವಾದ ಉಪನಿಷದ್ಸಂದೇಶ. ಭಾರತೀಯ ಧರ್ಮ-ಸಂಸ್ಕೃತಿಗಳ ಪರಿಭಾಷೆಯಲ್ಲಿ ಅದನ್ನು "ಅನುಷ್ಠಾನ ವೇದಾಂತ" (Practical Vedanta) ಎಂದು ಕರೆದರು ಸ್ವಾಮಿ ವಿವೇಕಾನಂದರು.

ಕ್ರಿಸ್ತಶಕೆಯ ಎರಡು ಸಾವಿರ ವರ್ಷ ಮುಗಿದು ಮೂರನೆ ಸಹಸ್ರಮಾನ ಆರಂಭವಾಗಿದೆ. ಈ ಎರಡು ಸಾವಿರ ವರ್ಷಗಳ ಇತಿಹಾಸವನ್ನೊಮ್ಮೆ ಸಿಂಹಾವಲೋಕನ ಮಾಡಿದರೆ ರಾಜ್ಯ ವಿಸ್ತರಣೆ, ಸಂಪತ್ತಿನ ಲೂಟಿ, ರಾಜಕೀಯ ಘರ್ಷಣೆಗಳಿಂದಾದ ರಕ್ತಪಾತಕ್ಕಿಂತ ಬಹುಪಾಲು ಹೆಚ್ಚು ರಕ್ತಪಾತ ಧರ್ಮದ ಹೆಸರಿನಲ್ಲಾಗಿರುವುದು ಸಖೇದಾಶ್ಚರ್ಯವನ್ನುಂಟುಮಾಡುತ್ತದೆ. ಪರಸ್ಪರ ಮತೀಯ ದ್ವೇಷ—ಅಸಹನೆಗಳಂತೂ ಶತಶತಮಾನಕ್ಕೂ ಹೆಚ್ಚುತ್ತ ವಿಜ್ಞಾನ-ತಂತ್ರಜ್ಞಾನ ಯುಗ ಎನಿಸಿರುವ ೨೦ನೇ ಶತಮಾನದಲ್ಲಿ—ಅದರಲ್ಲೂ ಅದರ ಉತ್ತರಾರ್ಧದಲ್ಲಿ ಪರಾಕಾಷ್ಠೆಯನ್ನು ಮುಟ್ಟಿ ಭಯಂಕರ ವಿಕಾರ ರೂಪವನ್ನು ತಾಳಿವೆ. ಮತಾಂಧ ಭಯೋತ್ಪಾದಕರ ಹಾವಳಿ ಜಗತ್ತಿನೆಲ್ಲ ದೇಶಗಳಲ್ಲೂ ಹೆಚ್ಚಾಗಿದೆ. ಬಹುಶಃ ಈ ಭಯೋತ್ಪಾದನೆಯೇ ಹೊಸ ಸಹಸ್ರಮಾನದ ಆಧ್ಯಾತ್ಮಿಕಯುಗವಾಗುವ (ಮಾನವಜೀವನದ) ತಿರುವಿಗೆ ಕಾರಣವಾಗಬಹುದೇನೊ! ವಿಶ್ವದ ಶಾಂತಿ ಹಾಗೂ ಸಹಬಾಳ್ವೆಗೆ ಸ್ವಾಮೀಜಿಯ ಸಂದೇಶದ ಆಚರಣೆಯ ಹೊರತು ಬೇರೆ ದಾರಿಯಿಲ್ಲ ಎಂಬುದನ್ನು ಮಾನವರೆಲ್ಲರಿಗೂ ಮನವರಿಕೆ ಮಾಡಿಕೊಡುವಂತಿವೆ ಇತ್ತೀಚಿನ ಘಟನೆಗಳು ಮತ್ತು ವಿದ್ಯಮಾನಗಳು.

ಸರ್ವಲೋಕಹಿತಕಾರಿಯಾದ ತತ್ತ್ವ-ಆದರ್ಶಗಳು, ಜೀವನದ ಶ್ರೇಷ್ಠ ಮೌಲ್ಯಗಳು ಕೇವಲ ಚಿಂತನೆಯಲ್ಲಿ, ಮಾತು-ಬರಹಗಳಲ್ಲಿ ಮುಗಿದುಹೋಗಬಾರದು. ಎಲ್ಲ ಶ್ರೀಸಾಮಾನ್ಯರ ದೈನಂದಿನ ಬದುಕಿನಲ್ಲಿ—ನಿತ್ಯದ ನಡೆ-ನುಡಿ, ಮನೋಧರ್ಮಗಳಲ್ಲಿ ಅವು ಅಳವಟ್ಟು ಅಭಿವ್ಯಕ್ತವಾಗಬೇಕು. ಆಚರಣೆಯಲ್ಲಿ ಬಾರದ ಆದರ್ಶ ಎಷ್ಟು ದೊಡ್ಡದಾದರೇನು ಅದರಿಂದ ಮನುಕುಲದ ವಿಕಾಸಕ್ಕೆ, ಮುನ್ನಡೆಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಈ ಮಾತನ್ನೇ ಸ್ವಾಮಿ ವಿವೇಕಾನಂದರು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳುತ್ತಾರೆ. ಕೇವಲ ತತ್ತ್ವವಾಗಿ, ಸಿದ್ಧಾಂತವಾಗಿ ಉಳಿದು ಗೊಡ್ಡಾಗಿಬಿಟ್ಟಿದ್ದ ವೇದಾಂತಕ್ಕೆ ಜೀವಚಾಲನೆ ನೀಡಿ ಅನುಷ್ಠಾನಸಾಧ್ಯ ಎಂಬುದನ್ನು ತೋರಿಸಿ ಆಚರಿಸಲು ಸುಲಭವನ್ನಾಗಿ ಮಾಡಿದರು. ಹಿಂದೂಗಳಲ್ಲಿ ಕೇವಲ ಸಂಪ್ರದಾಯವಾಗಿ, ಯಾಂತ್ರಿಕವಾಗಿ ನಡೆದು ಬಂದ ಅನೇಕ ಅರ್ಥಹೀನ ಧಾರ್ಮಿಕ-ಸಾಮಾಜಿಕ ಪದ್ಧತಿಗಳನ್ನೂ ಆಚರಣೆಗಳನ್ನೂ ನಿರ್ದಾಕ್ಷಿಣ್ಯವಾಗಿ ಖಂಡಿಸಿ ಅವುಗಳನ್ನು ತೆಗೆದುಹಾಕಿ, ಧರ್ಮಕ್ಕೆ ಹೊಸ ಅರ್ಥವನ್ನೂ ವಿಜ್ಞಾನಯುಗದ ಸವಾಲುಗಳಿಗೆ ಸರಿಯುತ್ತರವಾಗಿ ನಿಲ್ಲುವಂಥ ವೈಚಾರಿಕ ಶಕ್ತಿಯನ್ನೂ ನೀಡಿ, ಉನ್ನತ ವಿಚಾರಗಳೂ ತತ್ತ್ವಗಳೂ ಬದುಕಿಗೆ ಸಂಗತವಾಗುವಂತೆ ಹಾಗೆಯೇ ನಿತ್ಯದ ನಡೆ-ನುಡಿಗಳಲ್ಲಿ ಅಳವಡುವಂತೆ ಮಾಡಿದರು. ಹೀಗಾಗಿ ವಿಶ್ವಮಾನ್ಯವಾಗುವಂತಹ ಜೀವನ ತತ್ತ್ವಗಳೇ—ಅನುಷ್ಠಾನ ವೇದಾಂತವೇ—ಮೂರನೆ ಸಹಸ್ರಮಾನದ ಮಾನವಜೀವನಕ್ಕೆ ದಿವ್ಯವಾದ ತಾರಕಮಂತ್ರವಾಗಿದೆ ಈಗ.

**ಆದರ್ಶ ನಮ್ಮ ಹೃದ್ಗತವಾಗಿ ನಮ್ಮ ರಕ್ತನಾಳಗಳಲ್ಲೆಲ್ಲ ಸಂಚರಿಸಿ ಪ್ರತಿಯೊಂದು ರಕ್ತನಾಳವೂ ಈ ಭಾವನೆಯಿಂದ ಅನುರಣಿತವಾಗಿ ನಮ್ಮ ದೇಹದ ಅಂಗೋಪಾಂಗಗಳೆಲ್ಲೆಲ್ಲ ಸಂಚರಿಸುವ ತನಕ ಅದನ್ನು ನಾವು ಕೇಳಬೇಕು, ಅದನ್ನು ಕುರಿತು ಧ್ಯಾನಿಸಬೇಕು. 'ಹೃದಯ ತುಂಬಿದಾಗ ಮಾತು ಹೊಮ್ಮುತ್ತದೆ,' ಕೈಗಳೂ ಕೆಲಸ ಮಾಡುತ್ತವೆ..**

***—ಸ್ವಾಮಿ ವಿವೇಕಾನಂದ***

ಹಾಗಾದರೆ ಸ್ವಾಮೀಜಿ ಪ್ರತಿಪಾದಿಸಿದ 'ವೇದಾಂತ' ಎಂಬುದರ ಅರ್ಥ ಏನು? ಅದು ಹೇಗೆ ಅನುಷ್ಠಾನಸಾಧ್ಯವಾದುದು? ಅದರ ಆಚರಣೆಯಿಂದ ಮಾನವ ಸಮಾಜದಲ್ಲಿ, ಇಡೀ ವಿಶ್ವದಲ್ಲಿ, ಹೇಗೆ ಶಾಂತಿ-ಸಾಮರಸ್ಯಗಳುಂಟಾಗುವುದು? ಎಂಬೀ ಪ್ರಶ್ನೆಗಳಿಗೆ ಈಗ ಉತ್ತರ ಕಂಡುಕೊಳ್ಳೋಣ.

ವೇದಗಳಲ್ಲಿ ಕರ್ಮಕಾಂಡ, ಜ್ಞಾನಕಾಂಡ ಎಂಬ ಎರಡು ಭಾಗಗಳಿವೆ. ಧ್ಯಾನ-ಚಿಂತನಗಳಿಂದ ಋಷಿಗಳಿಗೆ ಸತ್ಯದರ್ಶನವಾದಾಗ ಈ ದಿವ್ಯವಾದ ಅನುಭವವನ್ನು ಅರ್ಥಮಾಡಿಕೊಳ್ಳಬಲ್ಲ ಸಾಧಕ ಶಿಷ್ಯರಿಗೆ ಹೇಳಿದರು. ಹಾಗೆ ಹೇಳಿದುದು ಉಪನಿಷತ್ತುಗಳಾದುವು. ವೇದಗಳ ಪರಮಪ್ರಮಾಣ ಈ ಅನುಭವ. ಆದ್ದರಿಂದ ಉಪನಿಷತ್ತುಗಳನ್ನು—ಮಂತ್ರರೂಪವಾದ ಆ ಅನುಭವಸಾರವನ್ನು—ವೇದಾಂತ ಎಂದು ಕರೆದರು. ಈ ವಿಶ್ವದ ಸಮಸ್ತ ಸೃಷ್ಟಿಯ ಮೂಲ ಕಾರಣವಾದ ಚೈತನ್ಯವೊಂದಿದೆ. ಅದು ಅನಾದಿ, ಅನಂತ, ಏಕಮೇವಾದ್ವಿತೀಯವಾದುದು. ಮಾತಿಗೆ, ಬುದ್ಧಿಗೆ, ಮನಸ್ಸಿಗೂ ನಿಲುಕುವಂಥದಲ್ಲ. ಅದು ಜಡ-ಚೇತನ-ಎಲ್ಲದರಲ್ಲೂ ಅಂತರ್ಗತವಾಗಿದೆ. ಅದನ್ನು ಬ್ರಹ್ಮ, ಪರತತ್ತ್ವ ಎಂದಿದ್ದಾರೆ. ಅನಂತ ಸ್ಥಿತಿಯಲ್ಲಿ ಅದು ಪರಮಾತ್ಮ, ಪರಮಸತ್ಯ, ಎಂದೂ ಬದಲಾಗದುದು. ಸಾಂತರೂಪದಲ್ಲಿ ಆತ್ಮವಾಗಿದೆ. ಜಗತ್ತಿನ ಎಲ್ಲವೂ ಅದರ ವಿವಿಧ ಅಭಿವ್ಯಕ್ತಿ. ಈ ಸತ್ಯವನ್ನು ಯಾರು ಬೇಕಾದರೂ ನೇರವಾದ ಅನುಭವದಿಂದ ಅರಿಯಬಹುದು. ಅರಿತವರಿಗೆ ತಮ್ಮೊಳಗೇ ಅಡಗಿ ಸುಪ್ತವಾಗಿರುವ ದಿವ್ಯತ್ವದ ಅನುಭವ ಸಹಜವಾಗುತ್ತದೆ. ಜ್ಞಾನದಿಂದ ಪೂರ್ಣ ದೃಷ್ಟಿ, ಭಕ್ತಿಯಿಂದ ವಿಶ್ವಪ್ರೇಮ-ಪ್ರೀತಿಯುತ ಬಾಂಧವ್ಯ, ನಿಷ್ಕಾಮಕರ್ಮದಿಂದ ತ್ಯಾಗ, ಜೀವಶಿವ

ಸೇವಾ ಮನೋಧರ್ಮ, ಧ್ಯಾನ-ಯೋಗ ಸಾಧನೆಯಿಂದ ದೈಹಿಕ ಆರೋಗ್ಯ, ಮಾನಸಿಕ ಶಾಂತಿ, ಆನಂದ ಉಂಟಾಗಿ ಈ ನಾಲ್ಕೂ ಸಾಧನಮಾರ್ಗಗಳ ಮಧುರ ಸಮನ್ವಯದಿಂದ ಪ್ರಾಪಂಚಿಕ ಬದುಕು ಸಾರ್ಥಕವಾಗುತ್ತದೆ. ಮೂಲಸತ್ಯದಿಂದ ಹೊಮ್ಮಿಬಂದ ಆತ್ಮ ಮತ್ತೆ ಶುದ್ಧರೂಪವಾಗಿ ಅಲ್ಲಿಗೇ ಎಂದರೆ ಸ್ವಸ್ವರೂಪದ ಶಾಂತಿ-ಆನಂದ ಸ್ಥಿತಿಗೆ ಹಿಂತಿರುಗುವುದೇ ಜೀವನದ ಪರಮಗುರಿ. ಉಪನಿಷತ್ತುಗಳ ಈ ತತ್ತ್ವಗಳನ್ನೇ ಭಗವದ್ಗೀತೆ ಸ್ವಾದರೂಪದಲ್ಲಿ ಹೇಳಿದೆ. ಸತ್ಯದ ಅರಿವು, ಆನಂದದ ಅನುಭವಗಳನ್ನು ಪಡೆಯುವುದಷ್ಟೇ ಅಲ್ಲ, ವ್ಯಕ್ತಿಯ ಹಾಗೂ ಸಮಾಜದ ಬದುಕು ಸುಖ-ಶಾಂತಿ-ಸಾಮರಸ್ಯಗಳಿಂದ ಕೂಡಿ ಉತ್ತಮ ಆಗಬೇಕು.

**ಆರೋಗ್ಯಕರವಾದ ಮನೋಧರ್ಮದಲ್ಲಿ ಸಾಮಾನ್ಯವಾದ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸಾರ್ವಕಾಲಿಕ, ಶ್ರೇಷ್ಠ ಮಾನವೀಯ ಮೌಲ್ಯಗಳನ್ನೇ "ಅನುಷ್ಠಾನ ವೇದಾಂತ" ಒಳಗೊಂಡಿದೆ.**

ಬುದ್ಧಗುರು, ಏಸು ಕ್ರಿಸ್ತ, ಮಹಮ್ಮದ್ ಪೈಗಂಬರ್, ಬಸವಾದಿ ಶರಣರು ಗಮನ ಹರಿಸಿದ್ದು ಜನಸಾಮಾನ್ಯರ ಐಹಿಕ ಹಾಗೂ ಪಾರಮಾರ್ಥಿಕ ಜೀವನದ ಉದ್ಧಾರಕ್ಕೆ ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಸ್ವಾಮೀಜಿ ಜನತೆಯನ್ನು ಎಚ್ಚರಗೊಳಿಸಿದುದು ಈ ಅಗತ್ಯದ ಪೂರೈಕೆಗೆ. ಜನರ ಜೀವನದೃಷ್ಟಿ, ಮನೋಧರ್ಮ ಬದಲಾಗಬೇಕು. ಆಗ ಜೀವನಶೈಲಿಯೂ ಬದಲಾಗುತ್ತದೆ. ಇದಕ್ಕೆ ಮೂಲಸಾಮಗ್ರಿಯನ್ನು ಈಗಾಗಲೇ ಋಷಿವರೇಣ್ಯರು "ವೇದಾಂತ" ಎಂಬ ಸಿದ್ಧರೂಪದಲ್ಲಿ ಕೊಟ್ಟಿದ್ದಾರೆ. ಇದಕ್ಕೇ ಸ್ವಾಮಿ ವಿವೇಕಾನಂದರು ಜೀವಚಾಲನೆ ನೀಡಿ ವಿಶ್ವಮಾನ್ಯವಾದ ಜೀವನ ಕಲೆಯ ರೂಪವನ್ನು ಕೊಟ್ಟು, ಅನುಷ್ಠಾನ ವೇದಾಂತ ಎಂಬ ಹೊಸ ಪರಿಕಲ್ಪನೆಯಾಗಿ ಮನುಕುಲದ ಮುಂದಿಟ್ಟಿದ್ದಾರೆ. ಈ ಮಾತಿನಲ್ಲಿಯೇ ಈ ಜೀವನತತ್ತ್ವ ಅನುಷ್ಠಾನ ಸಾಧ್ಯವಾದುದು ಎಂಬ ಅರ್ಥ ಧ್ವನಿತವಾಗುತ್ತದೆ. ಈಗಿನ ವಿಜ್ಞಾನ ಯುಗದಲ್ಲಿ ವೇದಾಂತ ಸಾರುವ ಮಾನವಧರ್ಮದ ಅಗತ್ಯ ಇನ್ನೂ ಹೆಚ್ಚು. ಅಲ್ಲದೆ ಧರ್ಮವೂ ಸಹ ವಿಜ್ಞಾನದಷ್ಟೆ ವೈಚಾರಿಕವಾದುದು ಎಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಆರೋಗ್ಯಕರವಾದ ಮನೋಧರ್ಮದಲ್ಲಿ ಸಾಮಾನ್ಯವಾದ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸಾರ್ವಕಾಲಿಕ, ಶ್ರೇಷ್ಠ ಮಾನವೀಯ ಮೌಲ್ಯಗಳನ್ನೇ "ಅನುಷ್ಠಾನ ವೇದಾಂತ" ಒಳಗೊಂಡಿದೆ.

ಪ್ರತಿಯೊಬ್ಬರೂ ತಮ್ಮೊಳಗಿನ ದೈವತ್ವವನ್ನು, ಹಾಗೆಯೇ ಇತರ ಎಲ್ಲ ಸಹಮಾನವರೊಳಗಿನ, ಎಲ್ಲ ಜೀವರೊಳಗಿನ ದೈವತ್ವವನ್ನೂ ಗುರುತಿಸಿ, ತಮ್ಮ ಪ್ರತಿಯೊಂದು ನಡೆ-ನುಡಿಗಳಲ್ಲೂ ದೈವೀಗುಣಗಳು ಅಭಿವ್ಯಕ್ತವಾಗುವಂತೆ ಬಾಳಲು ಪ್ರಯತ್ನಿಸಿದರೆ ಇಡೀ ಸಮಾಜದ ಬದುಕು ಉನ್ನತ ಹಾಗೂ ಉತ್ತಮ ಆಗುತ್ತದೆ. ಪ್ರಕೃತಿ ಸಹಜವಾದ ದೈಹಿಕ, ಬೌದ್ಧಿಕ, ಮಾನಸಿಕ ಬೆಳವಣಿಗೆಗಳ ಜೊತೆ ಜೊತೆಗೆ ಅಂತರಂಗದ ದೈವತ್ವದ ಬೆಳಕಿನಲ್ಲಿ ಆತ್ಮವಿಕಾಸದ ಪ್ರಕ್ರಿಯೆಯೂ ಆರಂಭವಾದ ಕೂಡಲೆ ಜಗತ್ತನ್ನೂ, ಬದುಕನ್ನೂ ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಆಗ ವ್ಯಕ್ತಿಯು ಎಲ್ಲವನ್ನೂ ಹೊಸ ದೃಷ್ಟಿಯಿಂದ ನೋಡಲು ಸಮರ್ಥನಾಗುತ್ತಾನೆ. ಇಂತಹ ವ್ಯಕ್ತಿಗಳಲ್ಲಿ ನಿಸ್ವಾರ್ಥವಾದ ಪ್ರೇಮ ಮತ್ತು ಸೇವಾ ಮನೋಭಾವಗಳಿಂದ ಕೂಡಿದ ಶೀಲ-ಚಾರಿತ್ರ್ಯ ಬೆಳೆಯಲು ಅವಕಾಶವಾಗುತ್ತದೆ. ವೃತ್ತಿ ಯಾವುದೇ ಇರಲಿ, ಹಣ ಸಂಪಾದನೆ, ಹಣ ಸಂಗ್ರಹ ಅವರಿಗೆ ಮುಖ್ಯವಾಗುವುದಿಲ್ಲ. ಕಾರ್ಯಶ್ರದ್ಧೆ, ಕಾರ್ಯಕ್ಷಮತೆ ಮುಖ್ಯವಾಗುತ್ತವೆ. ಮಾಡುವ ಕೆಲಸ ತೀರಾ ಸಾಧಾರಣವಾಗಿರುವಾಗಲೂ, ಉದಾಹರಣೆಗೆ ಕಸಗುಡಿಸುವ, ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ, ಗಿಡಗಳಿಗೆ ನೀರೂಡಿಸುವ ಕೆಲಸವೇ ಆಗಲಿ ಅದನ್ನು ಅತ್ಯಂತ ಶ್ರದ್ಧೆಯಿಂದ, ಪೂರ್ಣಗೌರವ ಹಾಗೂ ಸಂತಸಗಳಿಂದ, ಪರಮಪೂಜೆ ಎಂಬ ಪವಿತ್ರ ಭಾವನೆಯಿಂದ ಮಾಡುವ ಮನೋಧರ್ಮ ಇರುತ್ತದೆ.

ಹಾಗೆಯೇ ಯಾವ ನಿರ್ಧಾರವನ್ನೇ ಕೈಕೊಂಡರೂ ಯಾವ ಕಾರ್ಯವನ್ನೇ ಮಾಡಿದರೂ ಸ್ವಹಿತ ಪ್ರಧಾನವಾಗದೆ, ಸಮಷ್ಟಿಹಿತ ಪ್ರಧಾನವಾಗಿ ಅದಕ್ಕೆ ಆದ್ಯತೆಯನ್ನು ಕೊಡುವಂತಾಗುತ್ತದೆ. ಎಲ್ಲರ ಒಳಿತಿನಲ್ಲಿ, ಎಲ್ಲರ ಸುಖದಲ್ಲಿ ತನ್ನ ಒಳಿತು-ಸುಖಗಳನ್ನು ಕಾಣುವ ಲೋಕಪ್ರೀತಿಯ ಮನೋಧರ್ಮ ಇರುವ ವ್ಯಕ್ತಿಗಳು ಹೆಚ್ಚಾಗಿರುವ ಸಮಾಜದಲ್ಲಿ ಸುಖ-ಶಾಂತಿ ಸದಾ ನೆಲೆಸಿರುತ್ತವೆ. ಹಣವಿಲ್ಲದಿದ್ದರೇನಂತೆ ಹೃದಯ ಶ್ರೀಮಂತಿಕೆ ಇರುವವರು ಉನ್ನತವಾದ ಜೀವನವನ್ನು ನಡೆಸಬಲ್ಲರು. ಇವರ ಮನಸ್ಸು ಸದಾ ತೃಪ್ತಿ-ಸಂತೋಷ, ಶಾಂತಿ-ನೆಮ್ಮದಿಗಳಿಂದ ಕೂಡಿರುತ್ತದೆ. ಇಂಥವರು ಪ್ರಾಪಂಚಿಕ ವ್ಯವಹಾರಗಳಲ್ಲೇ ಸದಾ ಮುಳುಗಿರುವಾಗಲೂ ಅಂತರ್ಯದಲ್ಲಿ ಆಧ್ಯಾತ್ಮಿಕತೆ ವಿಕಾಸವಾಗುತ್ತ ಚಿತ್ತಸಮತೆ ಕುಂದದ ಪ್ರಸನ್ನತೆ ಇರುವ ಉನ್ನತ ಮನಸ್ಥಿತಿಯಲ್ಲಿರುತ್ತಾರೆ.

"ವೇದಾಂತ" ಎಂದಕೂಡಲೆ ಅದು ಕೇವಲ 'ಹಿಂದೂ' ಧರ್ಮದ, 'ಹಿಂದುತ್ವ' ದ ಪ್ರತಿಪಾದನೆ ಎಂದು ಯಾರೂ ತಪ್ಪು ತಿಳಿಯಬಾರದು. 'ವೇದಾಂತ' ಎಂಬ ಪದ ಹಿಂದೂಧರ್ಮದ ಪಾರಿಭಾಷಿಕ ಪದವಾದರೂ ಅದರ ಅರ್ಥ: ಆಧ್ಯಾತ್ಮಿಕ ದೃಷ್ಟಿಯನ್ನಿಟ್ಟುಕೊಂಡು ನಡೆಸುವ ವ್ಯಾವಹಾರಿಕ (ಪ್ರಾಪಂಚಿಕ) ಜೀವನ. ಋಷಿಗಳು ಸಾಕ್ಷಾತ್ಕರಿಸಿಕೊಂಡ ಸತ್ಯದರ್ಶನ, ಉಪನಿಷತ್ಸಾರ, ಒಂದು ದೇಶಕ್ಕೆ, ಒಂದು ಜನಾಂಗಕ್ಕೆ, ಜಾತಿಗೆ ಹಾಗೆಯೇ ಒಂದು ಕಾಲಕ್ಕೆ ಸೀಮಿತವಾದುದಲ್ಲ. ಆತ್ಮವಿಕಾಸ, ಆತ್ಮೋದ್ಧಾರ ಎಲ್ಲ ಮತಧರ್ಮಗಳೂ ಎತ್ತಿಹಿಡಿಯುವ ಜೀವನದ ಗುರಿ. 'ಅನುಷ್ಠಾನ ವೇದಾಂತ'ವನ್ನು ಅನುಸರಿಸುವುದು ಎಂದರೆ ಹಿಂದೂ ಆಗಿ ಮತಾಂತರಗೊಳ್ಳಬೇಕು ಎಂದೂ ಅರ್ಥವಲ್ಲ. ಯಾರೂ ಮತಾಂತರಗೊಳ್ಳುವ ಆವಶ್ಯಕತೆ ಎಲ್ಲಿಯೂ ಕಂಡುಬರುವುದಿಲ್ಲ. ಹಿಂದೂ, ಮುಸಲ್ಮಾನ್, ಕ್ರೈಸ್ತ, ಬೌದ್ಧ, ಜೈನ, ಸಿಖ್, ಪಾರಸಿಕ ಮುಂತಾದ ಬೇರೆ ಬೇರೆ ಮತಧರ್ಮಗಳಲ್ಲಿ ಹುಟ್ಟಿದವರು ಪೂಜೆ, ಪ್ರಾರ್ಥನೆ, ಶಾಸ್ತ್ರವಿಧಿ-ವಿಧಾನ, ಧಾರ್ಮಿಕ ಆಚರಣೆ, ಹಬ್ಬ ಹರಿದಿನ, ಸಾಮಾಜಿಕ ಪದ್ಧತಿಗಳನ್ನು ತಮ್ಮತಮ್ಮ ಸಂಪ್ರದಾಯ

ಗಳಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿರುವಂತೆಯೇ ಮಾಡಲಿ. ತಮ್ಮ ತಮ್ಮ ಧರ್ಮವನ್ನೂ ಪ್ರೀತಿಸಲಿ. ಹಾಗೆಯೇ ಇತರ ಧರ್ಮಗಳನ್ನೂ ಆ ಧರ್ಮಗಳಿಗೆ ಸೇರಿದವರನ್ನೂ ಪ್ರೀತಿ-ಗೌರವಗಳಿಂದ ಕಾಣಲಿ. ಅನ್ಯಮತಗಳ ಬಗ್ಗೆ ಅಸಹನೆ ಬೇಡ. ಸಹಿಷ್ಣುತೆ, ಉದಾರಭಾವನೆ ಇರಲಿ. ಹಿಂದೂಧರ್ಮ ಇತಿಹಾಸ ದುದ್ದಕ್ಕೂ ಇದೇ ರೀತಿ ನಡೆದಿದೆ. ಯಾರ ಮೇಲೂ ತನ್ನ ಮತವನ್ನು ಹೇರಹೋಗಿಲ್ಲ. ತನ್ನ ಧರ್ಮಕ್ಕೆ ಬಲಾತ್ಕಾರದಿಂದ ಯಾರನ್ನೂ ಮತಾಂತರಗೊಳಿಸಲೂ ಹೋಗಿಲ್ಲ. ಎಲ್ಲರೂ ತಮ್ಮ ತಮ್ಮ ಮತಧರ್ಮದ ಸಾರ್ವಕಾಲಿಕ, ಸಾರ್ವತ್ರಿಕ ತತ್ತ್ವಗಳನ್ನೇ ನಿತ್ಯಜೀವನದಲ್ಲಿ ಅನುಸರಿಸುತ್ತ ಶ್ರೇಷ್ಠಮಾನವರಾಗಬೇಕೆಂಬುದೇ ಅನುಷ್ಠಾನ ವೇದಾಂತದ ಆಶಯ. ವೇದಾಂತವು ತಿರುಳಿನಲ್ಲಿ ಲೌಕಿಕ -ಪಾರಮಾರ್ಥಿಕ ಜೀವನಗಳನ್ನು ಸಮನ್ವಯಗೊಳಿಸುವ ಆತ್ಮ ಸಾಧನೆ, ಜೀವನಕಲೆ. ಇದರಲ್ಲಿ ಜಾತಿ-ಮತ, ಮೇಲು-ಕೀಳು, ಹೆಣ್ಣು-ಗಂಡು, ಬಡವ-ಬಲ್ಲಿದ, ಆ ದೇಶ, ಈ ದೇಶ, ಎಂಬ ಯಾವುದೇ ಭೇದಭಾವಗಳೇ ಇಲ್ಲ.

ಅತ್ಯಾಧುನಿಕ ತಂತ್ರಜ್ಞಾನದ ಈ ಯುಗದಲ್ಲಿ ದೈಹಿಕ-ಬೌದ್ಧಿಕ ಆಯಾಮಗಳನ್ನು ಮೀರಿ ಬೆಳೆದ ಮಾನವ ತನ್ನೊಳಗಿನ ದೈವತ್ವ ವನ್ನು ಅರಿತಾಗ ವಿಜ್ಞಾನ ಮತ್ತು ತಂತ್ರಜ್ಞಾನ ನೀಡಿರುವ ಪ್ರಚಂಡ ಶಕ್ತಿಯನ್ನು ವಿಧ್ವಂಸಕ-ವಿನಾಶಕ ಕಾರ್ಯಗಳಿಗೆ ಬಳಸದೆ ವಿಧಾಯಕ ಹಾಗೂ ಲೋಕೋಪಯುಕ್ತ ಕಾರ್ಯಗಳಿಗೆ ಬಳಸುವ ವಿವೇಕವನ್ನು ಪಡೆಯುತ್ತಾನೆ. ಕೋಪ-ತಾಪ, ರಾಗ-ದ್ವೇಷ ಮೊದಲಾದ ಭಾವಾವೇಗಗಳಿಗೆ ಒಳಗಾಗದ ಸಮಚಿತ್ತವನ್ನು 'ಅನುಷ್ಠಾನ ವೇದಾಂತ' ನೀಡುವುದರಿಂದ ವಿವೇಕವು ಸದಾ ಜಾಗ್ರತವಾಗಿರುತ್ತದೆ. ಮೂರನೆ ಸಹಸ್ರಮಾನದ ಆರಂಭದ ಈ ಶತಕದಲ್ಲಿ ಆಗಬೇಕಾದ ಆಧ್ಯಾತ್ಮಿಕ ಬೆಳವಣಿಗೆ ಈ ಬಗೆಯದು. ಇದರಿಂದ ಹಿಂಸೆ, ಕ್ರೌರ್ಯ, ಭಯೋತ್ಪಾದನೆಗಳಿಂದಾದ ಸಮಸ್ಯೆಗಳೆಲ್ಲ ಪರಿಹಾರವಾಗುವುವು. ಇದು ಇಂದಿನ ತೀವ್ರ ಅಗತ್ಯವೂ ಆಗಿದೆ.

ಶ್ರೇಷ್ಠವಾದ ಜೀವನ ಮೌಲ್ಯಗಳಿಂದ ರೂಪುಗೊಳ್ಳುವ ಮಾನವೀಯ ಧರ್ಮವೇ 'ಅನುಷ್ಠಾನ ವೇದಾಂತ'ದಿಂದ ಬರುವ ಫಲ. ತ್ಯಾಗ ಮತ್ತು ಸೇವೆ ಅನುಷ್ಠಾನ ವೇದಾಂತದ ಹಾಸು-ಹೊಕ್ಕು ಇದ್ದಂತೆ. ಸೇವೆಯಿಂದ ಪ್ರೀತಿ, ವಿನಯ, ತ್ಯಾಗಗುಣಗಳು ಬೆಳೆಯುತ್ತವೆ. ಅಹಂಭಾವ ವಿಶ್ವಮಾನವ ಭಾವವಾಗಿ ಪರಿವರ್ತನೆಗೊಳ್ಳುತ್ತದೆ. ಸಂಕುಚಿತವಾದ ಸ್ವಾರ್ಥ ಮತ್ತು ಲೋಭದೃಷ್ಟಿಯ ಫಲವಾಗಿ ಹುಟ್ಟಿ, ಬೆಳೆಯುವ ಕ್ರೌರ್ಯ, ಹಿಂಸೆ, ಶೋಷಣಾ ಪ್ರವೃತ್ತಿಗಳೆಲ್ಲ ನಶಿಸಿ 'ದಾಸೋಹಂ ಭಾವ' ಉದಿಸುತ್ತದೆ. ವ್ಯಕ್ತಿ ಹೊಸ ಮನುಷ್ಯನಾಗುತ್ತಾನೆ. ಸಮಾಜವಷ್ಟೇ ಅಲ್ಲ, ಇಡೀ ಜಗತ್ತು ಉತ್ತಮವಾಗುತ್ತದೆ. ಬುದ್ಧದೇವನ ಅಷ್ಟಾಂಗ ಮಾರ್ಗ, ಬಸವಣ್ಣನವರ ಶರಣಧರ್ಮ, ಶ್ರೀರಾಮಕೃಷ್ಣರ ಸಮನ್ವಯ ದೃಷ್ಟಿಯ ವೇದಾಂತ—ಇವುಗಳು ಸಾರಿದ ಆಚರಣಶೀಲ ಜೀವನತತ್ತ್ವಗಳೇ 'ಅನುಷ್ಠಾನವೇದಾಂತ'ದಲ್ಲಿ ಸಂಜೀವನಗೊಂಡಿವೆ. ಎಲ್ಲರೂ ಇದನ್ನನುಸರಿಸಿ ನಡೆದಾಗ ಮಾಡುವ ಪೂಜೆಯಾಗಲಿ, ಧ್ಯಾನವಾಗಲಿ, ವೃತ್ತಿಯಾಗಲಿ, ಸಾಮಾಜಿಕ ಕಾರ್ಯವಾಗಲಿ, ಸೇವೆಯಾಗಲಿ, ಗೃಹಕೃತ್ಯದ ಸಾಧಾರಣ ಕೆಲಸ ಸಹ ಆತ್ಮವಿಕಾಸಕ್ಕೆ ಪೋಷಕವಾಗುತ್ತದೆ. ಹಿತ-ಮಿತ ಸಂಯಮಶೀಲ ಭೋಗ, ಆಸೆಗಳ ಮಿತಿ ಹಾಗೂ ನಿಯಂತ್ರಣಗಳಿಂದ ಕೂಡಿದ ಪ್ರಾಪಂಚಿಕತೆ, ಮತ್ತು ಪ್ರೇಮ-ತ್ಯಾಗ-ಸೇವೆಗಳಿಂದ ಕೂಡಿದ ಆಧ್ಯಾತ್ಮಿಕತೆ—ಇವು ಸಮರಸಗೊಳ್ಳುತ್ತವೆ.

---

**ರಾಮಕೃಷ್ಣ-ವಿವೇಕಾನಂದ ಸಂದೇಶವು ಶಾಂತಿ, ಬಾಂಧವ್ಯ ಮತ್ತು ವಿಶ್ವಭ್ರಾತೃತ್ವದ ಸಂದೇಶ. ಇಂದಿನ ಭಯಗ್ರಸ್ತ ಪ್ರಪಂಚಕ್ಕೆ ಆ ಸಂದೇಶವು ಉಳಿಗಾಲದ ಮಾರ್ಗವನ್ನು ತೋರಿಸುತ್ತದೆ.**

*—ಇ. ಪಿ. ಚೆಲಿಶೆವ್.*

---

ಶ್ರೀರಾಮಕೃಷ್ಣ-ವಿವೇಕಾನಂದ ಪ್ರಣೀತವಾದ 'ಅನುಷ್ಠಾನ ವೇದಾಂತ'ವನ್ನು ಸಮಸ್ತಮನುಕುಲವು ಸರಿಯಾಗಿ ಅರ್ಥಮಾಡಿಕೊಂಡು, ಅಂಗೀಕರಿಸಿ, ಆಚರಣೆಗೆ ತರಬೇಕಾದ ಕಾಲ ಇದು—ಈ ಮೂರನೆ ಸಹಸ್ರಮಾನದ ನವಯುಗಾರಂಭದ ಕಾಲ! ಈ ಸಮಸ್ತ ಮನುಕುಲದ ವಿಕಾಸವೇ ಶ್ರೀಅರವಿಂದರು ಮತ್ತು ಮಹಾತ್ಮಾ ಗಾಂಧೀಜಿ ತಮ್ಮ ಅಂತರ್ದೃಷ್ಟಿಯಿಂದ ಅರಿತ ಋತದ ಸಂಕಲ್ಪ; ಕಂಡ ದಿವ್ಯ ಭವಿಷ್ಯದ್ದರ್ಶನ. ಜಾತಿ-ಮತ-ದೇಶ-ಜನಾಂಗ-ವರ್ಣ-ವರ್ಗ-ಲಿಂಗ ಇತ್ಯಾದಿ ಭೇದಗಳೆಲ್ಲವನ್ನೂ ತೊರೆದು ಇಲ್ಲವೆ ಮರೆತು ಋತದ ಈ ದಿವ್ಯ ಸಂಕಲ್ಪಕ್ಕೆ ಮಣಿದು ನಮ್ಮ ಮನೋಧರ್ಮ ಮತ್ತು ವರ್ತನೆಗಳನ್ನು ತಿದ್ದಿಕೊಂಡು ನಡೆದುಕೊಳ್ಳುವುದರಲ್ಲೇ ಎಲ್ಲರ ಪ್ರೇಯಸ್ಸು, ಎಲ್ಲರ ಶ್ರೇಯಸ್ಸು ಇವೆ.

ಯಾವ ಜನಾಂಗವೇ ಆಗಲಿ, ಯಾವ ವ್ಯಕ್ತಿಯೇ ಆಗಲಿ, ಪ್ರತ್ಯೇಕವಾಗಿ ತನ್ನ ಹಕ್ಕನ್ನು ಅದರ ಮೇಲೆ ಸ್ಥಾಪಿಸಲಾರದು. ಎಲ್ಲ ಜೀವಿಗಳ ನೈಜ ಸ್ವಭಾವವೇ ಸತ್ಯ. ಅದಕ್ಕೋಸುಗ ಯಾರು ಪ್ರತ್ಯೇಕವಾದ ಹಕ್ಕನ್ನು ಸ್ಥಾಪಿಸಬಲ್ಲರು? ಆದರೆ ಅದನ್ನು ಅನುಷ್ಠಾನದಲ್ಲಿ ಬರುವಂತೆ ಮಾಡಬೇಕು. ಅದನ್ನು ಸುಲಭವಾಗಿ ತಿಳಿಯುವಂತೆ ಮಾಡಬೇಕು. ಉತ್ತಮಸತ್ಯ ಯಾವಾಗಲೂ ಅತಿ ಸುಲಭ. ಅದು ಸಮಾಜದ ಅಂಗಾಂಗಗಳಲ್ಲಿ ಪ್ರವಹಿಸುವಂತೆ ಆಗಬೇಕು. ಪ್ರೌಢಪಂಡಿತರ ಮತ್ತು ಪಾಮರರ, ಪುರುಷರ ಮತ್ತು ಸ್ತ್ರೀಯರ, ಆಬಾಲ ವೃದ್ಧರ ಸರ್ವಸಾಮಾನ್ಯ ಆಸ್ತಿಯಾಗಬೇಕು. ತರ್ಕಶಾಸ್ತ್ರದ ಶಾಖೋಪಶಾಖೆ, ತತ್ತ್ವಶಾಸ್ತ್ರದ ಸಿದ್ಧಾಂತದ ಹೊರೆ, ಪುರಾಣ, ಮತ್ತು ಬಾಹ್ಯಾಚಾರ ನಿಯಮಗಳು ಒಂದು ಕಾಲದಲ್ಲಿ ಚೆನ್ನಾಗಿದ್ದಿರಬಹುದು. ಆದರೆ ವಿಷಯವನ್ನು ಸುಲಭಗ್ರಾಹ್ಯವಾಗಿ ಮಾಡಲು ಪ್ರಯತ್ನಿಸೋಣ, ಪ್ರತಿ ಜೀವರಲ್ಲಿರುವ ಸತ್ಯವೇ ಪೂಜಾವಸ್ತುವಾಗಿ, ಪ್ರತಿಮಾನವನೂ ಉಪಾಸಕನಾಗುವ ಪುಣ್ಯಯುಗ ಉದಯಿಸುವಂತೆ ಮಾಡೋಣ.

—ಸ್ವಾಮಿ ವಿವೇಕಾನಂದ

ಸ್ಥಳದಾನ: ಸ್ಪಂದನ ನರ್ಸಿಂಗ್ ಹೋಮ್, ಬೆಂಗಳೂರು